## ಬೆಳದಿಂಗಳ ಸಂಗೀತ 211

19 ಏಪ್ರಿಲ್ 2019

ಗಾಯನ
ವಿದ್ವಾನ್ ಎನ್. ಶ್ರೀನಾಥ್

ವಯೊಲಿನ್
ವಿದ್ವಾನ್ ಸಿ.ಎನ್. ತ್ಯಾಗರಾಜನ್

ಮೃದಂಗ
ವಿದ್ವಾನ್ ಪಿ. ನಟರಾಜ್

ಮೋರ್ಚಿಂಗ್
ವಿದ್ವಾನ್ ವಿ.ಎಸ್. ರಮೇಶ್

### ಶ್ರೀ ಸುತ್ತೂರು ಮಠ, ಮೈಸೂರು ಶಾಖೆ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 210

21 ಮಾರ್ಚಿ 2019 * ಗುರುವಾರ * ಸಂಜೆ 6.00

ದಿವ್ಯ ಸಾನ್ನಿಧ್ಯ
ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ



ಗಾಯನ
ವಿದ್ವಾನ್ ವಿವೇಕ್ ಮೂಜಿಕ್ಕುಳಂ



ವಯೊಲಿನ್
ವಿದ್ವಾನ್ ವಿ.ಎಸ್. ಗೋಕುಲ್



ಮೃದಂಗ
ವಿದ್ವಾನ್ ಬಿ.ಸಿ. ಮಂಜುನಾಥ್

**ವಿದ್ವಾನ್ ವಿವೇಕ್ ಮೂಜಿಕ್ಕುಳಂ**ರವರು ಕೇರಳ ಮೂಲದ ಪ್ರತಿಭಾವಂತ ಸಂಗೀತಗಾರರು. ಸಂಗೀತದ ಪ್ರಾರಂಭಿಕ ಶಿಕ್ಷಣವನ್ನು ವಿದ್ವಾನ್ ವಿ.ಆರ್. ದಿಲೀಪ್‌ಕುಮಾರ್ ಬಳಿ ಕಲಿತು, ಪ್ರಸ್ತುತ ಚೆನ್ನೈನ ವಿದ್ವಾನ್ ಸಿ.ಆರ್. ವೈದ್ಯನಾಥನ್‌ರವರ (ಪದ್ಮಭೂಷಣ ಶ್ರೀ ಪಿ.ಎಸ್. ನಾರಾಯಣ ಸ್ವಾಮಿಯವರ ಶಿಷ್ಯ) ಬಳಿ ಉನ್ನತ ಅಭ್ಯಾಸ ನಡೆಸುತ್ತಿದ್ದಾರೆ.

ದೇಶದಾದ್ಯಂತ ಸಂಗೀತ ಕಚೇರಿಗಳಿಂದ ಪಂಡಿತಪಾಮರರನ್ನು ರಂಜಿಸಿರುವ ಶ್ರೀ ವಿವೇಕ್‌ರವರು ಎಂ.ಎ. ಮ್ಯೂಸಿಕ್ ಪದವೀಧರರು. ತ್ರಿಚೂರು ಆಕಾಶವಾಣಿಯ ಬಿ–ಹೈ ಶ್ರೇಣಿ ಕಲಾವಿದರು. ಕೇರಳ ಸರ್ಕಾರವು ನೀಡುವ ಚೆಂಬೈ ಪುರಸ್ಕಾರವೂ ಸೇರಿದಂತೆ ಹತ್ತಾರು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ಇವರು ಚಲನಚಿತ್ರ ಗಾಯಕರೂ ಹೌದು. ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಹಲವಾರು ಪ್ರತಿಷ್ಠಿತ ವೇದಿಕೆಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿ ಖ್ಯಾತರಾಗಿದ್ದಾರೆ.

**ವಿದ್ವಾನ್ ವಿ.ಎಸ್. ಗೋಕುಲ್**ರವರು ಶ್ರೀ ಸುರೇಂದ್ರನ್ ಅಲಂಕೋಡ್ ಮತ್ತು ಎಡಪ್ಪಳ್ಳಿ ಅಜಿತ್‌ಕುಮಾರ್‌ರವರ ಬಳಿ ವಯೊಲಿನ್ ವಾದನವನ್ನು ಕಲಿತಿದ್ದಾರೆ. ಅನಂತರ ಖ್ಯಾತ ವಿದುಷಿ ಸಂಗೀತಕಲಾನಿಧಿ ಎ. ಕನ್ಯಾಕುಮಾರಿಯವರ ಬಳಿ ಉನ್ನತ ಸಂಗೀತ ಸಾಧನೆ ಮಾಡುತ್ತಿದ್ದಾರೆ. 12ನೆಯ ವಯಸ್ಸಿನಲ್ಲಿಯೇ ವಯೊಲಿನ್ ಪಕ್ಕವಾದ್ಯ ನುಡಿಸಿದ ಇವರು ಮುಂಬಯಿಯ ಷಣ್ಮುಖಾನಂದ ಸಭೆಯು ನೀಡುವ ಎಂ.ಎಸ್. ಸುಬ್ಬಲಕ್ಷ್ಮಿ ಶಿಷ್ಯವೇತನವನ್ನು ಮತ್ತು ಉದಯೋನ್ಮುಖ ಕಲಾವಿದ ಪ್ರಶಸ್ತಿಯನ್ನು ಪಡೆದಿದ್ದಾರೆ. ಆಕಾಶವಾಣಿಯ ಅಖಿಲ ಭಾರತ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ್ದಾರೆ; 'ಬಿ' ಶ್ರೇಣಿಯ ಕಲಾವಿದರಾಗಿದ್ದಾರೆ.

**ವಿದ್ವಾನ್ ಬಿ.ಸಿ. ಮಂಜುನಾಥ್**ರವರು ಪ್ರಾಚೀನ ಹಾಗೂ ಅರ್ವಾಚೀನ ಲಯವಾದ್ಯಗಳಲ್ಲಿ ಸಮಾನ ಆಸಕ್ತಿ ಹಾಗೂ ಪರಿಶ್ರಮ ಹೊಂದಿದ್ದಾರೆ. ಮೊದಲಿಗೆ ತಂದೆ ಸಂಗೀತ ವಿದ್ಯಾನಿಧಿ ಡಾ. ಬಿ.ಕೆ. ಚಂದ್ರಮೌಳಿಯವರಲ್ಲಿ ಮೃದಂಗ ಶಿಕ್ಷಣ ಪಡೆದು, ಅನಂತರ ಗಾನಕಲಾಭೂಷಣ ಕೆ.ಎನ್. ಕೃಷ್ಣಮೂರ್ತಿ ಮತ್ತು ಸಂಗೀತಕಲಾನಿಧಿ ಡಾ. ಟಿ.ಕೆ. ಮೂರ್ತಿಯವರಲ್ಲಿ ಶಿಷ್ಯವೃತ್ತಿ ಮುಂದುವರಿಸಿದರು. ಕೇಂದ್ರ ಸಂಗೀತ ನಾಟಕ ಅಕ್ಯಾಡೆಮಿಯಿಂದ ಉಸ್ತಾದ್ ಬಿಸ್ಮಿಲ್ಲಾಖಾನ್ ಯುವ ಪುರಸ್ಕಾರ್, ಕಂಚಿ ಕಾಮಕೋಟಿ ಪೀಠದ ಪ್ರಶಸ್ತಿ ಮುಂತಾದ ಪುರಸ್ಕಾರಗಳಿಗೆ ಭಾಜನರಾಗಿರುವ ಇವರು ಆಕಾಶವಾಣಿ ಮತ್ತು ದೂರದರ್ಶನದ 'ಎ' ಶ್ರೇಣಿ ಕಲಾವಿದರಾಗಿದ್ದಾರೆ.